ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ, ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ.

ಆ) ಬಸ್ ನಿಲ್ದಾಣದ ಆವರಣಕ್ಕೆ ೧೯೮೬-೮೮ನೇ ಸಾಲಿನಲ್ಲಿ ಡಾಂಬರು ಹಾಕಲಾಗುವುದು.

ರಾಜ್ಯ ಸಾರಿಗೆ ಸಂಸ್ಥೆಯ ಬಗ್ಗೆ

೯೩೬. ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ).— ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಬಸ್‌ಗಳು ಸರಿಯಾಗಿ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿವೆ. ಹಾಗೂ ಎಷ್ಟು ಬಸ್‌ಗಳು ದುರಸ್ತಿ ಇಲ್ಲದೆ ಇರುವುವು?

ಶ್ರೀ ವೀರಣ್ಣ (ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೩೧-೧೨-೧೯೮೬ರಂತೆ ೭೬೫೯ ವಾಹನಗಳನ್ನು ಹೊಂದಿದೆ. ಈ ಕೆಳಕಂಡ ಪಟ್ಟಿಯಲ್ಲಿ ಸಂಸ್ಥೆಯಲ್ಲಿರುವ ವಾಹನಗಳ ಸಂಖ್ಯೆ ದುರಸ್ತಿಗಾಗಿ ಕಾರ್ಯಾಗಾರದಲ್ಲಿ ನಿಂತಿರುವ ಮತ್ತು ಅನುಪಯುಕ್ತವಾದ ವಾಹನಗಳ ಸಂಖ್ಯೆಯ ವಿವರಗಳನ್ನು ಕೊಟ್ಟಿದೆ.

ಸಂಸ್ಥೆಯು ಹೊಂದಿರುವ ವಾಹನಗಳು	ಸುಸ್ಥಿತಿಯಲ್ಲಿದ್ದು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿರುವ ವಾಹನಗಳು	ಪ್ರಾದೇಶಿಕ ಕಾರ್ಯಾಗಾರದಲ್ಲಿ ದುರಸ್ತಿಗಾಗಿ ನಿಂತಿರುವ ವಾಹನಗಳು	ಅನುಪಯುಕ್ತವಾದ ವಾಹನಗಳು
೭೬೫೯	೭೧೬೧	೪೩೪	೬೪

"ಸಾರಾಯಿ ಬಾಂಟ್ಲಿಂಗ್" ಲೈಸನ್ಸ್‌ಗಳ ಬಗ್ಗೆ

೯೯೩. ಶ್ರೀ ಎನ್. ಎಂ. ಅಡ್ಯಂತಾಯ (ಸಂರತ್ಕಲ್).— ಮಾನ್ಯ ಆರೋಗ್ಯ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರವು ಡಿಸೆಂಬರ್ ೧೯೮೬ರಲ್ಲಿ ನೀಡಿರುವ ಸಾರಾಯಿ ಬಾಟ್ಲಿಂಗ್ ಲೈಸನ್‌ಗಳನ್ನು ಯಾವ ಯಾವ ಡಿಸ್ಟಿಲರಿಗಳಿಗೆ ನೀಡಿದೆ?

ಆ) ಲೈಸನ್ಸ್‌ಗಳನ್ನು ಪಡೆದಿರುವವರ ವಿವರಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬಕಾರಿ ಸಚಿವರು).—

ಅ) ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ರಾಜ್ಯದಲ್ಲಿ ಸಾರಾಯಿಯನ್ನು ಸೀಸೆಗಳಲ್ಲಿ ತುಂಬಿ ಸರಬರಾಜು ಮಾಡಲು ತಾತ್ಕಾಲಿಕವಾಗಿ ಈ ಕೆಳಕಂಡ ಡಿಸ್ಟಿಲರಿಗಳಿಗೆ ಪರವಾನಿಗೆಗಳನ್ನು ಕೊಡಲಾಗಿದೆ.

೧) ಮೈಸೂರು ಶುಗರ್ ಕಂ. ಮಂಡ್ಯ.
೨) ಮೆ. ಜೆಮಿನಿ ಡಿಸ್ಟಿಲರೀಸ್ ಲಿ. ನಂಜನಗೂಡು.
೩) ಮೆ. ಡಿಸ್ಟಿಲರಿ ಕಂ. (ಪ್ರೈ) ಲಿಮಿಟೆಡ್ ಶಿವಮೊಗ್ಗ.